





# ಪೇಪರ್ ಕ್ವಿಲ್ಲಿಂಗ್ ಆಭರಣ

ಕ್ವಿಲ್ಲಿಂಗ್ ಕಲೆಯ ಮೂಲಕ ಆಕರ್ಷಕವಾದ ಪೇಪರ್ ಆಭರಣಗಳನ್ನು ತಯಾರಿಸಿ ಧರಿಸುವುದು ಇಂದಿನ ಫ್ಯಾಷನ್. ಎಷ್ಟೇ ಬಿಸಿಲಿನಲ್ಲಿ ಧರಿಸಿದರೂ ಬಣ್ಣ ಕೆಡುವುದಿಲ್ಲ, ತ್ವಚೆಗೆ ಅಲರ್ಜಿಯಾಗುವ ಸಂಭವವಿಲ್ಲ, ಕಳ್ಳಕಾಕರರ ಭಯವಿಲ್ಲ, ಯಾವುದೇ ಅಡ್ಡ ಪರಿಣಾಮ ಆಗುವುದಿಲ್ಲ, ಮದುವೆಯಲ್ಲಿ ಧರಿಸುವ ಆ್ಯಂಟಿಕ್ ಆಭರಣ ಇಲ್ಲವೇ ಇನ್ನಿತರ ಮೆಟಲ್ ಜ್ಯುವೆಲರಿಗಳಷ್ಟು ಭಾರ ಇಲ್ಲದ ಪೇಪರ್ ಆಭರಣಗಳು ಈಗ ಟ್ರೆಂಡಿಯಾಗಿವೆ.

■ **ಆಶಾ ಎಸ್. ಕುಲಕರ್ಣಿ**

ಬಣ್ಣ ಬಣ್ಣದ ನೆಕ್ಲೆಸ್, ಜುಮುಕಿ, ಬ್ರೇಸ್ಲೆಟ್, ಹೇರ್‌ಬ್ಯಾಂಡ್, ಕಾಲ್ಗೆಜ್ಜೆಗಳು.. ಹೀಗೆ ನಾನಾ ವಿನ್ಯಾಸದಲ್ಲಿ ಮಾರುಕಟ್ಟೆಗೆ ಬಂದಿರುವ ಪೇಪರ್ ಆಭರಣಗಳದ್ದೇ ಈಗ ಕಾರುಬಾರು.

ಹೌದು. ಪೇಪರ್ ಕ್ವಿಲ್ಲಿಂಗ್‌ನಿಂದ ತಯಾರಿಸಲ್ಪಟ್ಟ ಆಭರಣಗಳು ಈಗ ಮಹಿಳೆಯರ ಫ್ಯಾಷನ್ ಲೋಕಕ್ಕೆ ಎಂಟ್ರಿ ಕೊಟ್ಟಿವೆ. ಕಾಲೇಜ್ ಎತ್ನಿಕ್ ಡೇ ಫಂಕ್ಷನ್ ಇರಲಿ, ಸಭೆ, ಸಮಾರಂಭಗಳು ಇರಲಿ ಈಗ ಎಲ್ಲಿ ನೋಡಿದರೂ ಪೇಪರ್ ಆಭರಣಗಳದ್ದೇ ಭರಾಟೆ. ಇಂದು ಕೇವಲ ಹದಿಹರೆಯರ ಹುಡುಗಿಯರು ಮಾತ್ರವಲ್ಲ; ಎಲ್ಲ ವಯೋಮಾನದ ಮಹಿಳೆಯರನ್ನೂ ಸೂಜಿಗಲ್ಲಿನಂತೆ ತಮ್ಮತ್ತ ಸೆಳೆಯುತ್ತಿರುವ ಈ ಪೇಪರ್ ಆಭರಣಗಳು ಫ್ಯಾಷನ್ ಲೋಕದಲ್ಲಿ ಹೊಸ ಟ್ರೆಂಡನ್ನೇ ಸೃಷ್ಟಿಸಿವೆ.

## ಏನಿದು ಕ್ವಿಲ್ಲಿಂಗ್?

ಬಣ್ಣ ಬಣ್ಣದ ತೆಳುವಾಗಿ ಉದ್ದವಾಗಿ ಕತ್ತರಿಸಿದ ಕಾಗದದ ತುಂಡುಗಳನ್ನು ಮಡಚಿ, ಒಂದು ಸೂಜಿಯಿಂದ ಅದನ್ನು ಸುತ್ತಿ, ನಮಗೆ ಬೇಕಾದ ತರಹೇವಾರಿ ವಿನ್ಯಾಸಗಳಲ್ಲಿ ರೂಪಿಸುವ ಒಂದು ಕಲೆಯೇ ಕ್ವಿಲ್ಲಿಂಗ್. ಮನುಷ್ಯನ ಕ್ರಿಯಾಶೀಲತೆಗೊಂದು ಸವಾಲಾಗಿರುವ ಕ್ವಿಲ್ಲಿಂಗ್ ಕಲೆಯ ಮೂಲಕ ಆಕರ್ಷಕವಾದ ಪೇಪರ್ ಆಭರಣಗಳನ್ನು ತಯಾರಿಸಿ ಧರಿಸುವುದೇ ಇಂದಿನ ಫ್ಯಾಷನ್. ಎಷ್ಟೇ ಬಿಸಿಲಿನಲ್ಲಿ ಅಡ್ಡಾಡಿದರೂ ಬಣ್ಣ ಕೆಡುವುದಿಲ್ಲ, ತ್ವಚೆಗೆ ಅಲರ್ಜಿಯಾಗುವ ಸಂಭವವಿಲ್ಲ, ಕಳ್ಳಕಾಕರರ ಭಯವಿಲ್ಲ, ಯಾವುದೇ ಅಡ್ಡ ಪರಿಣಾಮ ಆಗುವುದಿಲ್ಲ, ಮದುವೆಯಲ್ಲಿ ಧರಿಸುವ ಆ್ಯಂಟಿಕ್ ಆಭರಣ ಇಲ್ಲವೇ ಇನ್ನಿತರ ಮೆಟಲ್ ಜ್ಯುವೆಲರಿಗಳಷ್ಟು ಭಾರ ಇಲ್ಲದ ಪೇಪರ್ ಆಭರಣಗಳು ಈಗ ಟ್ರೆಂಡಿಯಾಗಿವೆ.

ಮೊದಲು ಈ ಬಣ್ಣ ಬಣ್ಣದ ಪೇಪರ್‌ಗಳನ್ನು ಕ್ವಿಲ್ಲಿಂಗ್ ಮುಖಾಂತರ ವಿವಿಧ ವಿನ್ಯಾಸದಲ್ಲಿ ತಯಾರಿಸಿ ಮನೆಯ ಅಲಂಕಾರಿಕ ವಸ್ತುಗಳಾದ ಫೋಟೊ ಫ್ರೇಮ್‌ಗೆ ಸುತ್ತಲೂ ಅಲಂಕರಿಸುವುದು, ವಾಲ್ ಹ್ಯಾಂಗಿಂಗ್ಸ್ ತಯಾರಿಕೆಯಲ್ಲಿ ಬಳಸಲಾಗುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಈ ಕ್ವಿಲ್ಲಿಂಗ್ ಮುಖಾಂತರ ಆಭರಣ ತಯಾರಿಸಿ ಧರಿಸುವುದು ಒಂದು ಫ್ಯಾಷನ್ ಆಗಿ ಮಾರ್ಪಟ್ಟಿದೆ. ಇಂದಿನ ಆಧುನಿಕ ಯುವತಿಯರು ಈ ಕ್ವಿಲ್ಲಿಂಗ್ ಆಭರಣಗಳನ್ನು ಮದುವೆ ಮನೆಯಿಂದ ಹಿಡಿದು ಕಾಲೇಜು ಡೇ ಪಾರ್ಟಿಗಳಲ್ಲಿ ಧರಿಸಿ ಸಖತ್ತಾಗಿ ಮಿಂಚುತ್ತಿದ್ದಾರೆ. ಧರಿಸಲು ಭಾರವಿಲ್ಲದ, ಎಲ್ಲ ಬಣ್ಣ, ಡಿಸೈನ್‌ಗಳಲ್ಲೂ ಲಭ್ಯವಿರುವ ಅಗ್ಗದ ದರದಲ್ಲಿ ಸಿಗುವ ಈ ಪೇಪರ್ ಆಭರಣಗಳು ಈಗ ಕಾಲೇಜು ಕನ್ಯೆಯರ ಹಾಟ್ ಫೇವರೆಟ್ ಲಿಸ್ಟ್‌ನಲ್ಲಿ ಸೇರಿಕೊಂಡಿವೆ. ಅಷ್ಟೇ ಅಲ್ಲ, ಆಯಾ ಡ್ರೆಸ್‌ಗಳಿಗೆ ಮ್ಯಾಚಿಂಗ್ ಕಲರ್‌ಗಳಲ್ಲಿ ನಾವೇ ನಮ್ಮ ಮನೆಯಲ್ಲಿ ಸುಲಭವಾಗಿ ತಯಾರಿಸಿಕೊಂಡು ಧರಿಸಬಹುದು.

ಸಾಂಪ್ರದಾಯಿಕ ಉಡುಪುಗಳಿಗೂ ಸೈ; ಮಾಡರ್ನ್ ಡ್ರೆಸ್‌ಗಳಿಗೂ ಸೈ ಎನ್ನುವಂತೆ ರೇಷ್ಮೆ ಸೀರೆಗಳು, ಗಾಗ್ರಾ, ಲೆಹಂಗಾ, ಅನಾರ್ಕಲಿ, ಪಟಿಯಾಲ ಸೂಟ್‌ಗಳಿಂದ ಹಿಡಿದು ಜೀನ್ಸ್,